ನಿಮ್ಮೊಡನೆ

# ಕಟ್ಟುನಿಟ್ಟಿನ ಹೆಲ್ಮೆಟ್ ನಿಯಮ

ಯುವಜನರಲ್ಲಿ ಸ್ಕೂಟರ್ ಮತ್ತು ಬೈಕ್ ಸವಾರಿ ಹುಟ್ಟಿಸಿರುವ ಮೋಹಕ್ಕೆ ಎಣೆಯಿಲ್ಲ. ಬಹುತೇಕ ಯುವಜನರು ಬೈಕ್‌ಗಳಲ್ಲಿ ಸಾಗುವ ವೇಗ ನೋಡಿದರೆ ಎದೆಬಡಿತ ಹೆಚ್ಚುತ್ತದೆ. ಎಡ ಬಲ ಎನ್ನದೆ ಸಣ್ಣ ಜಾಗ ಸಿಕ್ಕಲ್ಲಿ ನಿರ್ಲಕ್ಷ್ಯದಿಂದ ಮುನ್ನುಗ್ಗುವುದನ್ನು ಬೈಕ್ ಸವಾರರು ಹೆಮ್ಮೆಯ ಸಂಗತಿ ಎಂದುಕೊಂಡಿದ್ದಾರೆ. ನಿಯಂತ್ರಣರಹಿತ ವೇಗ ಯಾವತ್ತೂ ಜೀವಕ್ಕೆ ಅಪಾಯವೇ. ಸ್ವಂತ ಜೀವ ಮಾತ್ರವಲ್ಲ, ರಸ್ತೆ ಬದಿ ನಡೆದುಹೋಗುವ ಪಾದಚಾರಿಗಳ ಜೀವಕ್ಕೂ! ರಸ್ತೆ ಅಪಘಾತಗಳಲ್ಲಿ ಅತ್ಯಂತ ಹೆಚ್ಚು ಸಾವು ಸಂಭವಿಸುವುದು ಭಾರತದಲ್ಲೇ. ಅದರಲ್ಲೂ ಈ ಅಪಘಾತಗಳ ಸಾವಿನಲ್ಲಿ ಶೇಕಡಾ 30ರಷ್ಟು ಪಾಲು ದ್ವಿಚಕ್ರ ವಾಹನ ಸವಾರರದ್ದು.

ದ್ವಿಚಕ್ರ ವಾಹನ ಚಲಾಯಿಸುವವರಿಗೆ ಹೆಲ್ಮೆಟ್ ಕಡ್ಡಾಯ ಮಾಡಿ ಎಷ್ಟೋ ವರ್ಷಗಳಾಗಿವೆ. ಆದರೆ ಈ ನಿಯಮವನ್ನು ಅನುಸರಿಸುವುದಕ್ಕಿಂತ, ನಿರ್ಲಕ್ಷಿಸುವವರೇ ಹೆಚ್ಚು. ಪೊಲೀಸರು ಸ್ವಲ್ಪ ಕಟ್ಟುನಿಟ್ಟಾಗಿ ನಿಯಮಗಳನ್ನು ಪಾಲಿಸುತ್ತಾರೆಂದು ಹೆದರಿ, ಕಾಟಾಚಾರಕ್ಕೆ ಕಳಪೆ ಹೆಲ್ಮೆಟ್ ಧರಿಸುವವರ ಸಂಖ್ಯೆಯೂ ದೊಡ್ಡದಿದೆ. ‘ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಐಎಸ್‌ಐ ಗುಣಮಟ್ಟದ ಹೆಲ್ಮೆಟ್‌ಗಳನ್ನೇ ಧರಿಸಬೇಕು. ಇಲ್ಲದಿದ್ದರೆ ಭಾರೀ ಜುಲ್ಮಾನೆ ವಿಧಿಸಲಾಗುತ್ತದೆ’ ಎಂದು ಇತ್ತೀಚೆಗೆ ಪೊಲೀಸರು ಸ್ಪಷ್ಟಪಡಿಸಿರುವುದು ಸ್ವಾಗತಾರ್ಹ. ಅದರ ಜತೆಗೇ ಈಗ ಕರ್ನಾಟಕ ಹೈಕೋರ್ಟ್ ಇನ್ನೊಂದು ಮಹತ್ವದ ಆದೇಶವನ್ನು ಹೊರಡಿಸಿದೆ. ‘ಅಪಘಾತಗಳಲ್ಲಿ ದ್ವಿಚಕ್ರ ವಾಹನ ಸವಾರರು ಗಾಯಗೊಂಡ ಅಥವಾ ಮೃತರಾದ ಪ್ರಕರಣಗಳಲ್ಲಿ ಸವಾರರು ಐಎಸ್‌ಐ ಗುರುತಿನ ಹೆಲ್ಮೆಟ್ ಧರಿಸಿದ್ದರೆ ಮಾತ್ರ ವಿಮೆಯ ಹಣ ಕೊಡಬೇಕು’ ಎನ್ನುವುದೇ ಈ ಆದೇಶ. ದ್ವಿಚಕ್ರ ವಾಹನ ಸವಾರರ ಸುರಕ್ಷೆಗೆ ಇದರಿಂದ ಹೆಚ್ಚು ಒತ್ತು ದೊರೆಯುತ್ತದೆ. ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳನ್ನು ಧರಿಸಿದರೆ ಅಪಘಾತದಲ್ಲಿ ವಿಮೆಯ ಹಣವೂ ಸಿಗುವುದಿಲ್ಲ ಎನ್ನುವ ಮೂಲಕ ಹೆಲ್ಮೆಟ್‌ಸಹಿತ ಸವಾರಿಗೆ ಜನರ ಮೇಲೆ ಒತ್ತಡ ಹೆಚ್ಚಿದಂತಾಗಿದೆ. ಇನ್ನು ಮುಂದೆಯಾದರೂ ದ್ವಿಚಕ್ರ ವಾಹನ ಸವಾರರು ಕಟ್ಟುನಿಟ್ಟಾಗಿ ಹೆಲ್ಮೆಟ್ ನಿಯಮಗಳನ್ನು ಪಾಲಿಸುವರೆ ಎನ್ನುವುದನ್ನು ಕಾದುನೋಡಬೇಕು.

ವಾಹನ ಅಪಘಾತಗಳಿಗೆ ಸಂಬಂಧಿಸಿ ವಿಶ್ವಸಂಸ್ಥೆಯು ಅಧ್ಯಯನವೊಂದನ್ನು ನಡೆಸಿದೆ. 2016ರಲ್ಲಿ ಬಿಡುಗಡೆಯಾದ ಈ ‘ಮೋಟಾರ್‌ಸೈಕಲ್ ಹೆಲ್ಮೆಟ್ ಸ್ಟಡಿ’ ವರದಿಯ ಪ್ರಕಾರ, ‘ನಿಯಮಬದ್ಧ ಗುರುತಿನ ಹೆಲ್ಮೆಟ್ ಧರಿಸುವುದರಿಂದ ಅಪಘಾತದಲ್ಲಿ ಸವಾರರು ಸಾವು ಸಂಭವಿಸದೆ ಉಳಿಯುವ ಸಾಧ್ಯತೆ ಶೇಕಡಾ 42ರಷ್ಟು ಹೆಚ್ಚು. ಹಾಗೆಯೇ ಅಪಘಾತಗಳಲ್ಲಿ ಗಾಯಗಳಾಗದೆ ತಪ್ಪಿಸಿಕೊಳ್ಳುವ ಸಾಧ್ಯತೆ ಶೇಕಡಾ 69ರಷ್ಟು’ ಎನ್ನಲಾಗಿದೆ. ಹೆಲ್ಮೆಟ್ ಧರಿಸುವ ನಿಯಮಗಳಿಗೆ ಸಂಬಂಧಿಸಿ ಜಾಗತಿಕ ಮಟ್ಟದಲ್ಲಿ ಸಮಾನ ನಿಯಮಗಳನ್ನು ರೂಪಿಸುವ ಅಗತ್ಯವನ್ನು ಈ ಅಧ್ಯಯನ ವರದಿ ಒತ್ತಿ ಹೇಳಿದೆ. ಸಾಮಾನ್ಯವಾಗಿ ಕಾರುಗಳಲ್ಲಿ ಪಯಣಿಸುವಾಗ ಆಗುವ ಅಪಘಾತಗಳಿಗಿಂತ 26 ಪಟ್ಟು ಹೆಚ್ಚು ಅಪಘಾತಗಳು ದ್ವಿಚಕ್ರ ವಾಹನದಲ್ಲಿ ಹೋಗುವಾಗ ಆಗುತ್ತದೆ. ಹೈಕೋರ್ಟ್‌ನ ಆದೇಶವೂ ಇದನ್ನು ಗುರುತಿಸಿದೆ.

ಬೈಕ್, ಸ್ಕೂಟರ್ ಚಲಾಯಿಸುವಾಗ ಯುವಜನರು ಹೆಚ್ಚು ಥ್ರಿಲ್ ಅನುಭವಿಸುತ್ತಾರೆ ಎನ್ನುವುದು ನಿಜ. ಆದರೆ ಯಾವುದೇ ಥ್ರಿಲ್ ಅನುಭವಿಸುವಾಗಲೂ ಸುರಕ್ಷೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಮರೆಯಬಾರದು. ಒಂದು ಕ್ಷಣದ ಮೈಮರೆವು ಇಡೀ ಕುಟುಂಬದ ಭವಿಷ್ಯವನ್ನು ಏರುಪೇರು ಮಾಡಬಹುದು. ನಿಯಮಗಳನ್ನು ಜನರು ಪಾಲಿಸುವಂತೆ ನೋಡಿಕೊಳ್ಳಬೇಕಾದ ಪೊಲೀಸರೇ ಹೆಲ್ಮೆಟ್ ನಿಯಮಗಳನ್ನು ಉಲ್ಲಂಘಿಸುವುದು ನಮ್ಮಲ್ಲಿ ಸಾಮಾನ್ಯವಾಗಿ ಕಂಡುಬರುವ ದೃಶ್ಯ. ಹೀಗಾಗದಂತೆ ಅಥವಾ ಹೀಗೆ ಮಾಡಿದರೆ ಅವರಿಗೂ ದಂಡ ವಿಧಿಸುವಂತೆ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು. ಸ್ವತಃ ಪೊಲೀಸರೇ ನಿಯಮ ಪಾಲನೆಯನ್ನು ಕಟ್ಟುನಿಟ್ಟಾಗಿ ನಡೆಸಿದರೆ ಯುವಜನರೂ ಅವರಿಂದ ಪ್ರಭಾವಿತರಾಗುತ್ತಾರೆ. ಕೆಲವೊಮ್ಮೆ ರಾಜಕೀಯ ನಾಯಕರ ರ‍್ಯಾಲಿಗಳಲ್ಲಿ ಜವಾಬ್ದಾರಿಯುತ ಜನಪ್ರತಿನಿಧಿಗಳು ಅಥವಾ ಪಕ್ಷಗಳ ಪ್ರಮುಖರು ಹೆಲ್ಮೆಟ್ ಇಲ್ಲದೆ ಸವಾರಿ ನಡೆಸುವುದೂ ಇದೆ. ಪೊಲೀಸರು ಇಂತಹ ಪ್ರಕರಣಗಳಲ್ಲೂ ತಪ್ಪಿತಸ್ಥರ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು.

■ ಬಿ.ಎಂ. ಹನೀಫ್

‘ಅಪಘಾತಗಳಲ್ಲಿ ದ್ವಿಚಕ್ರ ವಾಹನ ಸವಾರರು ಗಾಯಗೊಂಡ ಅಥವಾ ಮೃತರಾದ ಪ್ರಕರಣಗಳಲ್ಲಿ ಸವಾರರು ಐಎಸ್‌ಐ ಗುರುತಿನ ಹೆಲ್ಮೆಟ್ ಧರಿಸಿದ್ದರೆ ಮಾತ್ರ ವಿಮೆಯ ಹಣ ಕೊಡಬೇಕು’ ಎನ್ನುವ ರಾಜ್ಯ ಹೈಕೋರ್ಟ್‌ನ ಆದೇಶ ಸ್ವಾಗತಾರ್ಹ ಹಾಗೂ ಅತ್ಯಂತ ಮಹತ್ವದ್ದು.



ಈಶ್ವರ್